

# ಸತ್ತುಹೋದವನ ಮುತ್ತಿನ ಕಥೆ

**ಕನ್ನಡದಲ್ಲಿ ಇಂದು ಬರುತ್ತಿರುವ ಕಿರುಚಿತ್ರಗಳಲ್ಲಿ ಇದು ಗಮನಾರ್ಹ ಪ್ರಯತ್ನ. ತಾಂತ್ರಿಕ ಕೌಶಲಗಳನ್ನು ಕಥನದ ಕ್ಯಾನ್ವಾಸಿಗೆ ಒಗ್ಗಿಸಿಕೊಂಡು ಮಾಡಿದ ಈ ಪ್ರಯೋಗದಿಂದ ಕನ್ನಡ ಸಿನಿಮಾ ವಿದ್ಯಾರ್ಥಿಗಳು ಕಲಿತುಕೊಳ್ಳಬಹುದಾದದ್ದು ಸಾಕಷ್ಟಿದೆ.**

■ ಗೌರಿ

ಸಿನಿಮಾದ ಉದ್ದೇಶವೂ ಕಥೆ ಹೇಳುವುದು, ಅದರ ಮೂಲಕ ಬದುಕನ್ನು ಅರ್ಥ ಮಾಡಿಕೊಳ್ಳುವುದೇ ಆಗಿದ್ದರೂ ಹೇಳುವ ಕ್ರಮ ಬಳಸಿಕೊಳ್ಳುವ ಪರಿಕರಗಳು ಭಿನ್ನವಾಗಿರುತ್ತದೆ. ಅಕ್ಷರ ಮಾಧ್ಯಮಕ್ಕೆ ಅಥವಾ ಇನ್ನಾವುದೇ ಮಾಧ್ಯಮಕ್ಕೆ ಇಲ್ಲದ, ಸಿನಿಮಾ ಮಾಧ್ಯಮಕ್ಕೆ ಮಾತ್ರವೇ ಇರುವ ಸಾಧ್ಯತೆಗಳನ್ನು ತೀವ್ರವಾಗಿ ಶೋಧಿಸಿದಾಗ ಮಾತ್ರ ಆ ಮಾಧ್ಯಮದಲ್ಲಿ ಒಳ್ಳೆಯ ಕೃತಿ ಹುಟ್ಟಲು ಸಾಧ್ಯ. ಇಂಥ ತೀವ್ರ ಶೋಧನೆಯ ಉದಾಹರಣೆಯಂತೆ ಕಾಣಿಸುವುದು ‘ಮುತ್ತುರಾಜ’ ಕಿರುಚಿತ್ರ.

ಕಥೆಯ ಸಿದ್ಧ ಮಾದರಿ ಮತ್ತು ಸಿದ್ಧ ನಿರೂಪಣಾತಂತ್ರವನ್ನು ಆರಂಭದಿಂದಲೇ ಒಡೆಯುವ ಈ ಕಿರುಚಿತ್ರ, ಕಥೆಯ ಸುಸೂತ್ರ ಹೇಳುವಿಕೆಗಿಂತ ಇಮೇಜ್‌ಗಳ ಮೂಲಕ ಪ್ರೇಕ್ಷಕನ ಮನಸಲ್ಲಿ ಎಬ್ಬಿಸುವ ಭಾವತರಂಗಗಳನ್ನೇ ಹೆಚ್ಚಾಗಿ ನೆಚ್ಚಿಕೊಂಡಿವೆ.

ಹಾಗೆ ನೋಡಿದರೆ ಕನ್ನಡದ ಕಿರುಚಿತ್ರಗಳಲ್ಲಿ ಇದು ಅಪರೂಪವೂ ಗಮನಾರ್ಹವೂ ಆದ ಪ್ರಯೋಗವೇ.

ಹಲವು ಇಮೇಜ್‌ಗಳನ್ನು ಒಂದರ ಹಿಂದೆ ಇನ್ನೊಂದರಂತೆ ಜೋಡಿಸುತ್ತಲೇ ಒಂದು ಪ್ರಭಾವಲಯವನ್ನು ನಿರ್ಮಾಣ ಮಾಡುವ, ಆ ಮೂಲಕವೇ ಮನಸೊಳಗೆ ಏನೇನೋ ಭಾವಗಳನ್ನು ಬಡಿದೆಬ್ಬಿಸುವ ಪ್ರಯತ್ನವಿದು.

ಬರಿ ಕಥೆಯಾಗಿ ನೋಡಿದರೆ ಇಲ್ಲಿ ವಿಶೇಷವೇನಿಲ್ಲ. ತೀರಿಕೊಂಡ ಮುದುಕನೊಬ್ಬನ ಅಂತ್ಯಸಂಸ್ಕಾರ ನಡೆಯಬೇಕಿದೆ. ಇನ್ನೇನು ಚಿತೆಗೆ ಬೆಂಕಿ ಹಚ್ಚಬೇಕು, ಅಷ್ಟರಲ್ಲಿ ಅವನ ಮೊಮ್ಮಗಳು ಅವನ ಕೊನೆ ಆಸೆಯನ್ನು ಹೇಳುತ್ತಾಳೆ. ‘ಅಜ್ಜಿ ತನ್ನ ಹಣೆಗೆ ಮುತ್ತಿಡಬೇಕು ಅಂತ ಅಜ್ಜ ಹೇಳಿದ್ದ’ ಎಂಬ ಮಾತನ್ನು ಕೇಳಿ ಅಜ್ಜನ ಹೆಂಡತಿ ಹೆಣದ ಕಡೆಗೆ ನಡೆಯುತ್ತಾಳೆ. ಆದರೆ ತಕ್ಷಣ ಮೊಮ್ಮಗಳು ‘ನೀನಲ್ಲ, ಶಾಂತಜ್ಜಿ’ ಎನ್ನುತ್ತಾಳೆ. ಶಾಂತಮ್ಮ ಅಲ್ಲಿಯೇ ಆ ಮುದುಕನ ಹೆಣ ಸುಡಲು ಬಂದ ಇನ್ನೊಬ್ಬ ವ್ಯಕ್ತಿಯ ಹೆಂಡತಿ!



**ಹೆಸರು:** ಮುತ್ತುರಾಜ
**ನಿರ್ದೇಶನ:** ಶಕ್ತಿಪ್ರಸಾದ್
**ನಿರ್ಮಾಣ:** ಹೃತೀಶ್, ಶಕ್ತಿಪ್ರಸಾದ್
**ಸಂಕಲನ:** ನಬೀಲ್ ಅಸ್ಸಾತ್
**ಸಂಗೀತ:** ಗಗನ್ ಬಡೆಯಾ
**ಛಾಯಾಗ್ರಹಣ:** ಹೃತೀಶ್ ಎನ್.
**ತಾರಾಗಣ:** ಪುಟ್ರಾಜು, ಹರ್ಷಿತ್, ಪುಟ್ರಾಜಮ್ಮ, ಅನನ್ಯ, ಮಹಾದೇವಪ್ಪ, ಶಿವಕುಮಾರ್

ಮೇಲ್ನೋಟಕ್ಕೆ ಒಂದು ವಾಟ್ಸ್ ಆ್ಯಪ್ ಜೋಕಿನಂತೆ ಕಾಣುವ ಈ ಘಟನೆಯನ್ನು ಮಧ್ಯದಲ್ಲಿಟ್ಟುಕೊಂಡು ನಿರ್ದೇಶಕರು ಹಲವು ಘನವಾದ ಇಮೇಜ್‌ಗಳನ್ನು ಕಟ್ಟುತ್ತ ಹೋಗುತ್ತಾರೆ. ಒಂದೊಂದು ಇಮೇಜ್ ಕೂಡ ಇಡೀ ಚಿತ್ರದ ಪರಿಣಾಮವನ್ನು ಹೆಚ್ಚಿಸುತ್ತಲೇ ಹೋಗುತ್ತದೆ. ಸದಾ ಒಂದು ನಾಯಿ ಬಗಲಲ್ಲಿ ಇಟ್ಟುಕೊಂಡಿರುವ ಹರಿ, ತಾತನ ಸಾವಿನ ದುಃಖ ಮರೆಯಲು ಶೇಂದಿ ಅಂಗಡಿಗೆ ಬಂದಿರುವ ಕಿರಣ, ಪುಟ್ಟ ಹುಡುಗಿ, ಅಚಾನಕ್ಕಾಗಿ ಸಿಕ್ಕು ತಂದೆಯ ಹೆಣದ ಎದುರು ವಾದ್ಯ ನುಡಿಸುವ ವಾದ್ಯದವರು ಎಲ್ಲ ಪಾತ್ರಗಳೂ ಈ ಕ್ಯಾನ್ವಾಸನ್ನು ವಿಸ್ತರಿಸುತ್ತಲೇ ಹೋಗುತ್ತಾರೆ. ಈ ಇಮೇಜ್‌ಗಳ ಹಿಂದೆ ಇರುವ ಒಂದು ಕಥೆಯ ಸುಳಿವನ್ನು ಹನಿ ಹನಿಯಾಗಿ ಬಿಟ್ಟುಕೊಡುತ್ತಲೇ ಹೋಗುತ್ತವೆ.

ಛಾಯಾಗ್ರಹಣ ಈ ಕಿರುಚಿತ್ರದ ಸತ್ವವನ್ನು ಗಮನಾರ್ಹವಾಗಿ ಹೆಚ್ಚಿಸಿದೆ. ಲಾರಿ ಹಿಂದೆ ಟಾಂ ಟಾಂ ಗಾಡಿ ನಿಂತಿರುವುದು, ಹೆಣಗಳನ್ನು ಹೊತ್ತು ಸಾಗುವುದು, ಬೆಂಕಿ ಹಚ್ಚಲು ಸಿದ್ಧವಾಗಿರುವ ಚಿತೆ ಹೀಗೆ ಮನಸ್ಸಲ್ಲಿ ಕಚ್ಚಿಕೊಳ್ಳುವ ಹಲವು ಫ್ರೇಮ್‌ಗಳನ್ನು ಕಿರುಚಿತ್ರದುದ್ದಕ್ಕೂ ಕಾಣುತ್ತ ಹೋಗಬಹುದು. ಕಥೆಯ ನಿರೂಪಣೆಯಲ್ಲಿರುವ ತುಸು ವಿಕ್ಷಿಪ್ತ ಎನಿಸುವ ಗುಣಕ್ಕೂ ಈ ಛಾಯಾಗ್ರಹಣಕ್ಕೂ ಇರುವ ಅನನ್ಯ ಸಂಬಂಧ ಇಡೀ ಚಿತ್ರಕ್ಕೊಂದು ಘನವಾದ ವಾತಾವರಣವನ್ನು ಕಟ್ಟಿಕೊಟ್ಟಿದೆ.

ಕಥೆ ಎಂದರೆ ಪಟಪನೆ ಸಿಡಿಯುವ ಮಾತಿನ ಚಟಾಕಿ, ಸಂಕಲನವೆಂದರೆ ಚಕಚಕನೆ ಕತ್ತರಿಸಿಜೋಡಿಸಿಟ್ಟ ದೃಶ್ಯಗಳ ನಿಬಿಡಸಾಲು, ಛಾಯಾಗ್ರಹಣವೆಂದರೆ ವಾಸ್ತವದಲ್ಲಿ ಇರದ ಬಣ್ಣಗಳನ್ನೂ ತಂದು ಫ್ರೇಮಿನಲ್ಲಿ ಪೇರಿಸುವುದು ಎಂಬ ಭ್ರಮೆಗಳೇ ತುಂಬಿರುವ ಈಗಿನ ವಾತಾವರಣದಲ್ಲಿ ‘ಮುತ್ತುರಾಜ’ ಖಂಡಿತ ಅಚ್ಚರಿಯನ್ನೂ, ಇದರ ಹಿಂದಿನ ಸೃಜನಶೀಲ ಮನಸ್ಸುಗಳ ಬಗ್ಗೆ ನಿರೀಕ್ಷೆಯನ್ನೂ ಹುಟ್ಟಿಸಬಲ್ಲ ಕಿರುಚಿತ್ರ. ■

ಈ ಕಿರುಚಿತ್ರ ವೀಕ್ಷಣೆಗೆ bit.ly/3w3eHH1 ಕೊಂಡಿ/ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.